ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

## Office of the Deputy Commissioner, Kolar District, Kolar-563101

ಸಂಖ್ಯೆ: ಜಿಚುಕೋ/ಚುನಾವಣೆ/ಕೋಮುಲ್/ಸಿಆರ್-75/2023-24 ದಿನಾಂಕ: 01-03-2024

ರವರಿಗೆ

ವ್ಯವಸ್ಥಾಪಕ ನಿರ್ದೇಶಕರು
ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ
ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ,
ಕೋಲಾರ, ಕೋಲಾರ ಜಿಲ್ಲೆ.

ಮಾನ್ಯರೇ,

**ವಿಷಯ:** ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರ ಇದರ ಆಡಳಿತ ಮಂಡಲಿಯ ಚುನಾವಣೆಗೆ ಸಂಬಂದಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13-ಡಿ ರೀತ್ಯಾ ಕರಡು ಮತದಾರರ ಪಟ್ಟಿಯನ್ನು ಅನುಮೋದಿಸಿ ಪ್ರಕಟಿಸುತ್ತಿರವ ಬಗ್ಗೆ.

**ಉಲ್ಲೇಖ**
1. ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರಿ, ಬೆಂಗಳೂರುರವರ ಆದೇಶ ಸಮಖ್ಯೆ ಸಚುಪ್ರಾ/ಆಡಳಿತ/ಪೆಸಸಂಚುನೇ/58/2023-24 ದಿನಾಂಕ 27-09-2023
2. ಈ ಕಚೇರಿ ಅಧಿಸೂಚನೆ ಸಂಖ್ಯೆ ಜಿಚುಕೋ/ಚುನಾವಣೆ/ಕೋಮುಲ್/ಸಿಆರ್-75/2023-24 ದಿನಾಂಕ 01-01-2024
3. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರ ಆದೇಶ ಪತ್ರ ಸಚುಪ್ರಾ/ಬೆಂ.ಪ್ರಾ/ಪೆಡರಲ್/ಆಮಂಚು/122/2023-24 ದಿನಾಂಕ 14-12-2023
4. ಈ ಕಚೇರಿ ಮತದಾರರ ಪಟ್ಟಿ ಪರಶೀಲನಾಧಿಕಾರಿ ನೇಮಕ ಆದೇಶ ಸಂಖ್ಯೆ ಚಿಚುಕೋ/ಚುನಾವಣೆ/ಕೋಮುಲ್/ಸಿಆರ್-785/2023-24 ದಿನಾಂಕ 01-01-2024
5. ವ್ಯವಸ್ಥಾಪಕ ನಿರ್ಧೇಶಕರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರರವರ ಪತ್ರಸಂಖ್ಯೆಕೋಚಿಹಾಒ/ಶೇತಾಂ/ಆಮಂಚು/10697/2023-24 ದಿನಾಂಕ 27-02-2024
6. ಸಹಕಾರ ಸಂಘಗಳ ಲೆಕ್ಕಪರಿಶೋದನಾ ಉಪನಿರ್ಧೇಶಕರು ಹಾಗೂ ಮತದಾರರ ಪಟ್ಟಿ ಪರಿಶೀಲನಾಧಿಕಾರಿಗಳ ಪತ್ರ ಸಂಖ್ಯೆ ಸಸಂಲೆಉನಿ/ಕೋಮುಲ್/ಮಪಪ/ಸಿಆರ್-752/2023-24 ದಿನಾಂಕ 27-02-2024

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1) ರ ಪತ್ರದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರ ಇದರ ಆಡಳಿತ ಮಂಡಲಿ ಚುನಾವಣೆಗೆ ಸಂಬಂದಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಕೋಲಾರರವರನ್ನು ನೇಮಕ ಮಾಡಲಾಗಿರುತ್ತದೆ.

ಪುಟ 2 ರಲ್ಲಿ . . .

ಅದರಂತೆ ಉಲ್ಲೇಖ (2) ರಲ್ಲಿ ದಿನಾಂಕ 28-04-2024 ರಂದು ಆಡಳಿತ ಮಂಢಳಿ ಚುನಾವಣೆ ದಿನಾಂಕವನ್ನು ನಿಗದಿಪಡಿಸಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14(1)ರಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದೇ ರೀತಿ ಉಲ್ಲೇಖ (3)ರ ಚುನಾವಣಾ ಪ್ರಾಧಿಕಾರದ ಆದೇಶದಲ್ಲಿ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

ಉಲ್ಲೇಖ (4) ರ ಈ ಕಚೇರಿ ಆದೇಶದಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋದನಾ ಉಪನಿರ್ದೇಶಕರು, ಕೋಲಾರ ಜಿಲ್ಲೆ, ಕೋಲಾರರವರನ್ನು ಮತದಾರರ ಪಟ್ಟಿ ಪರಿಶೀಲನಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ. ವ್ಯವಸ್ಥಾಪಕ ನಿರ್ಧೇಶಕರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರರವರು ಉಲ್ಲೇಖ (5) ರಲ್ಲಿ ರವರು ಕರಡು ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಮತದಾರರ ಪಟ್ಟಿ ಪರಿಶೀಲನಾಧಿಕಾರಿಗಳಿಗೆ ಅನುಮೋದನೆಗೆ ಸಲ್ಲಿಸಿರುತ್ತಾರೆ. ಸದರಿ ಕರಡು ಮತದಾರರ ಪಟ್ಟಿಯನ್ನು ಮತದಾರರ ಪಟ್ಟಿ ಪರಿಶೀಲನಾಧಿಕಾರಿಗಳು ಪರಿಶೀಲನೆ ಮಾಡಿದ್ದು, ಹಾಗೂ ಪ್ರತಿ ಸಹಕಾರ ಸಂಘದ ಪ್ರತಿನಿಧಿ/ಡೆಲಿಗೇಟ್ ಪಾರಂಗಳನ್ನು ಸಂಘವಾರು ಪರಿಶೀಲನೆ ಮಾಡಿ ಅಂತಿಮ ಕರಡು ಮತದಾರರ ಪಟ್ಟಿಯಲ್ಲಿ ಅನುಬಂದ-1 ರಲ್ಲಿ 1772 ಸಹಕಾರ ಸಂಘಗಳು ಮತದಾನದ ಅರ್ಹತೆಯನ್ನು ಹೊಂದಿದ್ದು, ಅನುಬಂದ-2, ಅನುಬಂದ-3 ರಲ್ಲಿ ಯಾವುದೇ ಸಹಕಾರ ಸಂಘಗಳು ಇರುವುದಿಲ್ಲ, ಅನುಬಂದ-4 ರಲ್ಲಿ 153 ಸಹಕಾರ ಸಂಘಗಳು ಮತದಾನದ ಅನರ್ಹತೆಯನ್ನು ಹೊಂದಿರುತ್ತವೆಂದು ಸದರಿ ಅನುಬಂದ-1, ಅನುಬಂದ-2, ಅನುಬಂದ-3 ಹಾಗೂ ಅನುಬಂದ-4 ರಲ್ಲಿ ಕರಡು ಅರ್ಹ ಮತ್ತು ಅನರ್ಹ ಸದಸ್ಯ ಸಹಕಾರ ಸಂಘಗಳ ಪಟ್ಟಿಗಳನ್ನು ಲಗತ್ತಿಸಿ ಉಲ್ಲೇಖ (6) ರಲ್ಲಿ ಈ ಕಚೇರಿಗೆ ಸಲ್ಲಿಸಿ ಕರಡು ಮತದಾರರ ಪಟ್ಟಿಯನ್ನು ಅನುಮೋದಿಸಿ ಚುನಾವಣಾ ದಿನಾಂಕದಿಂದ 50 ದಿನಗಳ ಮುಂಚೆ ನಿಯಮ 13-ಡಿ(3)(ಎ) ರೀತ್ಯಾ ಪ್ರಕಟಣೆ ಮಾಡಬೇಕಾಗಿರುವುದರಿಂದ ಈ ಬಗ್ಗೆ ಮುಂದಿನ ಕ್ರಮವಿಡಲು ಕೋರಿರುತ್ತಾರೆ. ಸದರಿಯವರು ಸಲ್ಲಿಸಿದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾಧಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರ ಇದರ ಕರಡು ಮತದಾರರ ಪಟ್ಟಿಯನ್ನು ಅನುಮೋದಿಸಿ ಈ ಪತ್ರದೊಂದಿಗೆ ಲಗತ್ತಿಸಿ ರವಾನಿಸಿದೆ.

ಸದರಿ ಅನುಮೋದಿತ ಕರಡು ಮತದಾರರ ಪಟ್ಟಿಯನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13-ಡಿ(3)(ಎ) ಮತ್ತು (ಬಿ) ರೀತ್ಯಾ ಕ್ರಮವಿಟ್ಟು ಕರಡು ಮತದಾರರ ಪಟ್ಟಿಯನ್ನು ಈ ಕಚೇರಿಯ ಸೂಚನಾಫಲಕದಲ್ಲಿ ಪ್ರಕಟಿಸಿದ್ದು ಒಕ್ಕೂಟದ ಕೇಂಧ್ರ ಕಚೇರಿ ಮತ್ತು ಶಿಭಿರ ಕಚೇರಿಗಳ ಸೂಚನಾಫಲಕದಲ್ಲಿ ಪ್ರಕಟಿಸಲು ಹಾಗೂ ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ ಒಕ್ಕೂಟದ ಜಾಲತಾಣದಲ್ಲಿಯೂ ಪ್ರಕಟಿಸಲು ಸೂಚಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಾನುಸಾರ ಅನಬಂಧ-(4) ರಲ್ಲಿರುವ ಅನರ್ಹ ಮತದಾರರ ಪೈಕಿ ಅರ್ಹತೆಯನ್ನು ಹೊಂದುವಂತಹ ಸದಸ್ಯರು ಕರಡು ಪಟ್ಟಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ತಮ್ಮ ಅರ್ಹತೆಯನ್ನು ಸಾಬೀತುಪಡಿಸುವ ದಾಖಲೆಗಳೊಂದಿಗೆ ಪ್ರತಿನಿಧಿ/ಡೆಲಿಗೇಟ್ ನಮೂನೆಗಳೊಂದಿಗೆ ಮತದಾರರ ಪಟ್ಟಿ ಪರಿಶಿಲನಾಧಿಕಾರಿಗಳಿಗೆ ಸಲ್ಲಿಸಿ ಪರಿಶೀಲನೆಯನ್ನು ಪೂರ್ಣಗೊಳಿಸಲು ಕ್ರಮವಿಟ್ಟು ನಿಯಮ 13-ಡಿ(ಸಿ) ಮತ್ತು (ಡಿ) ರೀತ್ಯಾ ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲು ಹಾಗೂ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ನಿಯಮಾನುಸಾರ ಮುಂದಿನ ಕ್ರಮವಿಡಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ

(ಅಕ್ರಂ ಪಾಷ ಭಾ.ಆ.ಸೇ)
ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು
ಕೋಲಾರ ಜಿಲ್ಲೆ, ಕೋಲಾರ